ದಿನಾಂಕ: ಏಪ್ರಿಲ್ 26 2014

# ಪ್ರಚಾರ ದಿನಚರಿ- 26/04/2014

ಅರುಣ್ ಜೇಟ್ಲಿ

(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ನಿನ್ನೆ, ನರೇಂದ್ರ ಮೋದಿ ಅವರು ಪಂಜಾಬಿನಲ್ಲಿ ಐದು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಅವರೊಂದಿಗೆ ಮುಖ್ಯ ಮಂತ್ರಿಗಳಾದ ಸರ್ದಾರ್ ಪ್ರಕಾಶ್ ಸಿಂಗ್ ಬಾದಲ್ ಹಾಗೂ ರಾಜ್ಯ ಭಾಜಪ ಅಧ್ಯಕ್ಷರಾದ ಕಮಲ್ ಶರ್ಮಾ ಭಾಗವಹಿಸಿದ್ದರು. ಪ್ರತಿಯೊಂದು ಸಭೆಗೆ ಜನರು ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಪ್ರಚಾರ ಸಭೆಗಳಲ್ಲಿ ಜನರ ಉತ್ಸಾಹ ಮತ್ತು ವ್ಯಾಪಕ ಹಾಜರಾತಿ ಸ್ಪಷ್ಟ ಸಂದೇಶ ಒಂದನ್ನು ರವಾನಿಸುತ್ತಿತ್ತು. ಮೋದಿ ಅವರ ಪಂಜಾಬ್ ಭೇಟಿ ಚುನಾವಣಾ ಕಣದಲ್ಲಿ ಸಕಾರಾತ್ಮಕ ಸಂಚಲನ ಮೂಡಿಸಿತ್ತು.

ವಿಶೇಷವಾಗಿ ಯುವಕರಲ್ಲಿ ಮೋದಿ ಪರ ಒಲವು ಎದ್ದು ಕಾಣುತ್ತಿತ್ತು. ಯುವ ಪೀಳಿಗೆಯನ್ನು ಹುರಿದುಂಬಿಸುವ ಪ್ರೇರೇಪಿಸುವ ಸಾಮರ್ಥ್ಯ ಸರ್ವವೇದ್ಯ. ಆಡಳಿತ ವಿಚಾರದಲ್ಲಿ ಭ್ರಮನಿರಸನ ಮೂಡಿರುವ ಈ ಪರಿಸ್ಥಿತಿಯಲ್ಲಿ ಮೋದಿ ಅವರು ಆಶಾಕಿರಣವಾಗಿ ಮೂಡಿದ್ದಾರೆ.

ಸಾರ್ವಜನಿಕ ಸಭೆಗೆ ಭಾಗವಹಿಸದೆ ಇದ್ದವರು ಕೂಡ ಮೋದಿ ಅವರ ಭೇಟಿಯಿಂದ ಉದ್ಭವಿಸಿದ ಸಂಚಲನದ ಕುರಿತು ಚರ್ಚಿಸುತ್ತಿದ್ದುದು ಕಂಡುಬಂತು. ಮೋದಿ ಅವರ ಭೇಟಿ ಎಲ್ಲರ ಮನಸ್ಸನ್ನು ಆವರಿಸಿತ್ತು. ಆಡಿದ್ದನ್ನು ಮಾಡುವ ಸಾಮರ್ಥ್ಯವಿರುವ ವ್ಯಕ್ತಿ ಮೋದಿ ಎಂಬ ಭರವಸೆ ಜನರಲ್ಲಿ ಮೂಡಿದಂತಿದೆ. ಹೀಗಿರುವುದರಿಂದಲೆ ಜನೋತ್ಸಾಹದ ರಾಜಕಾರಣದಲ್ಲಿ ವಿಶ್ವಾಸವಿಡುವವರು ಮೋದಿ ಬೆಂಬಲಕ್ಕೆ ತಮ್ಮೆಲ್ಲ ಶಕ್ತಿ ನೀಡಿದ್ದಾರೆ.

ಜನರಲ್ ವಿ.ಕೆ.ಸಿಂಗ್ ಅಮೃತಸರದಲ್ಲಿ

ಇಂದು, ಹಾಕಿಕೊಂಡ ಹಲವಾರು ಕಾರ್ಯಕ್ರಮಗಳಲ್ಲಿ ಬಹುಮುಖ್ಯವಾದದ್ದೆಂದರೆ ಮಾಜಿ ಸೇನಾ ಪ್ರಮುಖ ಜನರಲ್ ವಿ.ಕೆ.ಸಿಂಗ್ ಉದ್ದೇಶಿಸಿ ಮಾತನಾಡುವ ಮಾಜಿ ಸೈನಿಕರ ಸಮಾವೇಶ. ಈಗಾಗಲೇ ಸಶಸ್ತ್ರ ಪಡೆಗಳ ಹಲವಾರು ಅಧಿಕಾರಿಗಳು ಈ ಕಾರ್ಯಕ್ರಮಕ್ಕೆ ಭರದ ಸಿದ್ಧತೆ ನಸೆಸುತ್ತಿರುವುದು ಕಂಡು ಬಂದಿದೆ. ಒಂದು ರ್‍ಯಾಂಕ್ ಒಂದು ಪಿಂಚಣಿ ಯೋಜನೆಯನ್ನು ಪ್ರಕಟಿಸಿದ ನಂತರವೂ ಮಾಜಿ ಸೈನಿಕರು ನೊಂದಿದ್ದಾರೆ. ಪ್ರಕಟಣೆಯ ನೊಂದಾವಣೆ ಈವರೆಗೂ ಜಾರಿಯಾಗಿಲ್ಲ. ಜೊತೆಗೆ, ರಾಷ್ಟ್ರೀಯ ಭದ್ರತೆ ವಿಚಾರದಲ್ಲಿ ಯುಪಿಎ ಸರ್ಕಾರದ ದುರ್ಬಲ ನೀತಿ ನಿರೂಪಣೆಯಿಂದ ರಾಷ್ಟ್ರೀಯ ಭದ್ರತೆಯ ಹೊಣೆಹೊತ್ತಿರುವವರ ಮನಸ್ಸಿನ ಮೇಲೆ ಘಾಸಿಯಾಗಿದೆ. ಭೌಗೋಳಿಕ ರಾಜತಾಂತ್ರಿಕ ಸನ್ನಿವೇಶ ನೋಡಿದಾಗ ಮುಂದೆ ಎದುರಾಗಬಲ್ಲ ಘರ್ಷಣೆಯಲ್ಲಿ ಪಾಕಿಸ್ತಾನ ಮತ್ತು ಚೀನಾ ಜಂಟಿಯಾಗಿ ದಾಳಿನಡೆಸುವ ಸಾಧ್ಯತೆ ಹೆಚ್ಚು. ನಮ್ಮ ರಕ್ಷಣಾ ಸಾಮಗ್ರಿಗಳ ಖರೀದಿ ಹಾಗೂ ಸಿದ್ಧತೆಯನ್ನು ಕಡೆಗಣಿಸಲಾಗಿದೆ. ರಕ್ಷಾ ಸಚಿವರಾದ ಎ.ಕೆ.ಆಂಥಣಿ ಅಧೀನ ನಮ್ಮ ರಕ್ಷಣಾ ಸಿದ್ಧತೆಗಳು ದೃತಿಗೆಟ್ಟಿದ್ದು, ದಿಕ್ಕು ಕಾಣದೆ ಬಡವಾಗಿದೆ.

□□□□□